ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ —ಅಲಾಟ್‌ಮೆಂಟ್ ಬಾರದ ಕಾರಣ ಪರ್‌ಚೇಸ್ ಮಾಡಿಲ್ಲ ಎಂದು ನನಗೆ ತಿಳಿದು ಬಂದಿದೆ. ನನ್ನ ಕ್ಷೇತ್ರದ ಕುಂಬಾಶಿಯಲ್ಲಿ ಎಲ್ಲಾ ಮನೆಗಳು ಸ್ವಾಧೀನ ಆಗಿಲ್ಲ. ಅಲ್ಲಿ ನೀರಿನ ಕೊರತೆ ಇದೆ. ಹಾಗಾಗಿ ಅಲ್ಲಿಗೆ ಯಾರೂ ಬಂದಿಲ್ಲ. ಆ ಬಗ್ಗೆ ತಮ್ಮಲ್ಲಿ ವಿವರಗಳು ಇಲ್ಲ ಎಂದು ಕಾಣುತ್ತದೆ.

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ನನ್ನ ಹತ್ತಿರ ಇರುವ ಮಾಹಿತಿಯ ಪ್ರಕಾರ ಅಲ್ಲಿ ಎಲ್ಲಾ ಮನೆಗಳೂ ಅಲಾಟ್ ಆಗಿವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ. ಈ ೧೭೬೨ ಮನೆಗಳನ್ನು ಫಲಾನುಭವಿಗಳಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ವಿವಿಧ ವರ್ಗಗಳ ಜನರಿಗಾಗಿ ೪೫೫ ಮನೆಗಳನ್ನು ನಿರ್ಮಿಸುವ ಉದ್ದೇಶ ಇದೆ ಎಂದು ಹೇಳಿದ್ದಾರೆ, ಹಾಗಾದರೆ ಆ ಮನೆಗಳನ್ನು ಕಾರ್ಕಳದಲ್ಲಿ ಎಲ್ಲಿ ಕಟ್ಟುವಂಥ ನಿಶ್ಚಯ ಮಾಡಿದ್ದೀರಿ. ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಅಲ್ಲಿ ೪೫೫ ಮನೆಗಳನ್ನು ಕಟ್ಟುವ ಉದ್ದೇಶವಿದೆ, ಅದರ ಬಗ್ಗೆ ಪ್ರಾಜೆಕ್ಟ್‌ಸ್ಕೀಮ್ ತಯಾರಾಗುತ್ತಾ ಇದೆ. ಅದರ ಬಗ್ಗೆ ವಿವರಗಳನ್ನು ಕೊಡುತ್ತೇನೆ. ತಾಲ್ಲೂಕುವಾರು ಮಾಹಿತಿಯನ್ನು ತಾವುಗಳು ಕೇಳಿದ್ದೀರಿ. ಮತ್ತು ಹಂಚಿಕೆಯ ಪಟ್ಟಿಯು ಬಹಳ ದೊಡ್ಡದಾಗಿ ಇರುವುದರಿಂದ ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೆ.....

MR. SPEAKER.—I have not allowed you to speak.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಸಚಿವರು ಕೊಟ್ಟಿರತಕ್ಕಂಥ ಉತ್ತರವು ಸರಿಯಾಗಿಲ್ಲ. ಉತ್ತರದಲ್ಲಿ ಕಾರ್ಕಳದಲ್ಲಿ ೪೫೫ ಮನೆಗಳನ್ನು ವಿವಿಧವರ್ಗಗಳ ಜನರಿಗೆ ನಿರ್ಮಿಸಲಾಗುವುದು ಎಂದು ಹೇಳಿದ್ದಾರೆ. ಆ ಮನೆಗಳನ್ನು ಎಲ್ಲಿ ಕಟ್ಟಲು ಉದ್ದೇಶಿಸಿದ್ದಾರೆ ಎಂದು ಹೇಳುವುದು ಬೇಡವೆ, ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಇದನ್ನು ಕಾರ್ಕಳ ಟೌನಿನಲ್ಲಿ ಮಾಡುತ್ತೇವೆ.

ಶಹಬಾದ್ ಪಟ್ಟಣಕ್ಕೆ ನೀರು ಸರಬರಾಜು ಯೋಜನೆ.

೨೧೫೭. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್) ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೪ರಲ್ಲಿ ಶಹಬಾದ್ ಪಟ್ಟಣಕ್ಕೆ ಹೆಚ್ಚು ನೀರು ಸರಬರಾಜು ಮಾಡುವ ಯೋಜನೆಗೆ ಮಾನ್ಯ ಮುಖ್ಯ ಮಂತ್ರಿಗಳು ಅಡಿಗಲ್ಲು ಹಾಕಿದ್ದು ನಿಜವೆ ?

ಆ) ಸದರಿ ಯೋಜನೆಗೆ ಯಾವ ಯಾವ ಸಂಸ್ಥೆಗಳಿಂದ ಹಣ ಪಡೆಯಲಾಯಿತು ಮತ್ತು ಬಡ್ಡಿ ರೂಪದಲ್ಲಿ ಪಾವತಿ ಮಾಡಲಾದ ಹಣವೆಷ್ಟು ?

ಇ) ಸದರಿ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್, (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಸಚಿವರು).—

ಅ) ಹೌದು.

ಆ) ಸದರಿ ಯೋಜನೆಗೆ ಸರ್ಕಾರದಿಂದ ಒದಗಿಸಲಾದ ಸಾಲದ ಜೊತೆಗೆ ಜೀವ ವಿಮಾ ನಿಗಮದಿಂದ ಮತ್ತು ಮಾರುಕಟ್ಟೆ ಸಾಲದಿಂದ ಹಣ ಪಡೆಯಲಾಗಿದೆ. ಜೀವ ವಿಮಾ ನಿಗಮಕ್ಕೆ ಹಾಗೂ ಮಾರುಕಟ್ಟೆ ಸಾಲಕ್ಕೆ ೧೧.೮೨ ಲಕ್ಷ ರೂಗಳನ್ನು ಬಡ್ಡಿ ರೂಪದಲ್ಲಿ ಪಾವತಿ ಮಾಡಲಾಗಿದೆ.

ಇ) ಈ ಯೋಜನೆಯು ಕೆಲಸಗಳಲ್ಲಿ ೭ ೦೦ ಲಕ್ಷ ಗ್ಯಾಲನ್ ಸಾಮರ್ಥ್ಯದ ನೆಲಮಟ್ಟದ ಜಲ ಸಂಗ್ರಹಾಗಾರದ ಕೆಲಸವು ಮೇಲ್ಚಾವಣಿ ಮಟ್ಟದವರೆಗೆ ಬಂದಿದ್ದು ಮೇಲ್ಚಾವಣಿಗೆ ಕಾಂಕ್ರೀಟ್ ಹಾಕುವ ಕೆಲಸಕ್ಕೆ ಏರ್ಪಾಡು ಮಾಡಲಾಗುತ್ತಿದೆ, ೩೫೦ ಮಿ.ಮೀ. ವ್ಯಾಸದ ಬೀಡು ಕಬ್ಬಿಣದ ಪೈಪು

ಕೊಳವೆ ಮಾರ್ಗ ಹಾಕುವ ಕೆಲಸವು ೨ ಕಿ. ಮೀ.ವರೆಗೆ ಹಾಕಲಾಗಿದ್ದು ಉಳಿದ ಕೆಲಸವು ಪ್ರಗತಿಯಲ್ಲಿದೆ. ಜಾಕ್‌ವೆಲ್ ಮತ್ತು ಪಂಪಿನ ಮನೆ ಕಟ್ಟುವ ಕೆಲಸಗಳಿಗೆ ಗುತ್ತಿಗೆದಾರರನ್ನು ನೇಮಿಸಲಾಗಿದೆ. ಈ ಕೆಲಸಗಳನ್ನು ಶೀಘ್ರದಲ್ಲಿಯೇ ಕೈಗೆತ್ತಿಕೊಳ್ಳಲಾಗುವುದು. ವಿತರಣೆ ಕೊಳವೆಗಳ ಜಾಲಕ್ಕೆ ಬೇಕಾಗುವ ಕೊಳವೆಗಳನ್ನು ಈಗಾಗಲೇ ಪಡೆಯಲಾಗಿದೆ. ಇವುಗಳನ್ನು ಹಾಕುವ ಕೆಲಸಕ್ಕೆ ಟೆಂಡರ್ ಕರೆಯಲಾಗಿ ಕೂಡ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಕೆ. ಬಿ. ಶಾಣಪ್ಪ.—ಈ ಕೆಲಸಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ೧೯೬೪ರಲ್ಲಿ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಆಗ ಈ ಕೆಲಸದ ಅಂದಾಜು ವೆಚ್ಚ ಎಷ್ಟು ? ಈ ಕೆಲಸ ಎಷ್ಟು ವರ್ಷದಲ್ಲಿ ಮುಗಿಯಬೇಕಾಗಿತ್ತು. ಈಗ ಅಂದರೆ ೧೯೬೮ರಲ್ಲಿ ನೀವು ಕೊಟ್ಟ ಮಾಹಿತಿಯ ಪ್ರಕಾರ ರಿಸರ್ವಾಯರ್ ಪೂರ್ಣಗೊಂಡಿದೆ. ಜಾಕ್‌ವೆಲ್‌ಗಾಗಿ ಫಾಬ್ಲ್ಯಂ ಆಗಿದೆ. ಈ ಕೆಲಸವನ್ನು ತೆಗೆದುಕೊಂಡಿದ್ದ ಗುತ್ತಿಗೆದಾರರು, ಕ್ಯಾನ್ಸರ್ ಬಂದು ಅಮೇರಿಕಾಕ್ಕೆ ಹೋಗಿದ್ದಾರೆ. ೬೦ ಸಾವಿರ ರೂಪಾಯಿಯನ್ನು ಬೋರ್ಡಿನಿಂದ ಕ್ಲೈಮ್ ಮಾಡಿದ್ದಾರೆ, ಈ ವಿವರಗಳನ್ನು ನಿಮ್ಮ ಉತ್ತರದಲ್ಲಿ ಹೇಳಲ್ಲ. ಈ ಗುತ್ತಿಗೆದಾರರನ್ನು ತೆಗೆದುಹಾಕಿ, ಬೇರೆ ಗುತ್ತಿಗೆದಾರರನ್ನು ನೇಮಿಸಿದರೆ it will be possible for the prevous contractor to go to court and obtain stay order. ಇದರಿಂದಾಗಿ ನಿಮ್ಮ ಕೆಲಸ ಮುಂದಕ್ಕೆ ಹೋಗವುದೆಂಬ ಆಂಶ ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಈಗ ಈ ಕೆಲಸಕ್ಕಾಗಿ ಯಾವ ಯಾವ ಗುತ್ತಿಗದಾರರುಗಳನ್ನು ನೇಮಿಸಿದ್ದೀರಿ ? ಆ ಗುತ್ತಿಗೆದಾರರಂಗಳ ಹೆಸರುಗಳನ್ನು ತಾವು ದಯವಾಡಿ ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್ (ಮಾನ್ಯ ನಗರಾಭಿವೃದ್ಧಿ ಮಂತ್ರಿ ಮತ್ತು ಲೋಕೋಪಯೋಗಿ ಸಚಿವರು).—ಈ ಕೆಲಸಕ್ಕೆ ೧೯೬೩-೬೪ರಲ್ಲಿ ಮಂಜೂರಾತಿ ಸಿಕ್ಕಿದೆ. ಆಗಿನ ಅಂದಾಜು ವೆಚ್ಚ ೮೫ ಲಕ್ಷ ರೂಪಾಯಿಗಳು. ಮಾನ್ಯ ಸದಸ್ಯರು ಹೇಳಿದ ಹಾಗೆ ಜಾಕ್‌ವೆಲ್ ಪ್ರಾಬ್ಲಂಬಂತು. ಆ ಸ್ಥಳವನ್ನು ಆಯ್ಕೆ ಮಾಡುವಾಗ ಭೂವಿವಾದ ಬಂತು. ಈ ಕಾರಣದಿಂದ ನಿಧಾನವಾಗಿ ಗುತ್ತಿಗೆದಾರರು ಕೆಲಸವನ್ನು ಕೈಬಿಟ್ಟರು. ಆಮೇಲೆ ಸ್ಥಳವನ್ನು ಬದಲಾವಣೆ ಮಾಡಲಾಯಿತು, ಪಂಪಿನ ಮನೆಯನ್ನು ಕಟ್ಟುವುದಕ್ಕೆ ಬೇರೆ ಗುತ್ತಿಗೆದಾರರನ್ನು ನೇಮಕಮಾಡಿದ್ದಾರೆ. ಈ ಕಾರಣದಿಂದ ಕೆಲಸ ತಡವಾಯಿತು, ಎರಡನೇ ಕಾರಣವೇನೆಂದರೆ ಜಲ ಸಂಗ್ರಹಾಲಯದ ಕೆಲಸ ನಡೆಯುವಾಗ ಈ ವಿಷಯವು, ಕೋರ್ಟಿಗೆ ಹೋಯಿತು. ಕೋರ್ಟಿಗೆ ಹೋದದ್ದರಿಂದ ೨ ವರ್ಷ ನಿಧಾನವಾಯಿತು. ಈಗ ತಡೆ ಆಜ್ಞೆ ತೆರವಾಗಿದೆ. ಕೆಲಸವನ್ನು ಆದಷ್ಟು ಬೇಗ ಪ್ರಾರಂಭಮಾಡುತ್ತೇವೆ. ಸುಮಾರು ೩.೩ ಕಿ.ಮೀ. ಕೊಳವೆ ಬಾವಿಯನ್ನು ಹಾಕಬೇಕು. ೨ ಕಿ.ಮೀ. ದೂರದಲ್ಲಿ ಕೊಳವೆ ಬಾವಿಗಳನ್ನು ಹಾಕಲಾಗಿದೆ. ಈ ಜಾಕ್‌ವೆಲ್ ಮತ್ತು ರಿಸರ್ವಾಯರ್ ಸಮಸ್ಯೆ ಪರಿಹಾರವಾಗಿದೆ. ಕೆಲಸವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ ಬಿ. ಶಾಣಪ್ಪ.—ಕೆಲಸ ಪ್ರಾರಂಭ ಆಗುವ ಮುಂಚೆ ಪೈಪ್ ಖರೀದಿಗಾಗಿ ಎಲ್.ಐ.ಸಿ. ಯವರು ಕೊಟ್ಟ ಹಣವನ್ನು ಉಪಯೋಗಿಸದ ಹಾಗೆಯೇ ಇಟ್ಟಿದ್ದಾರೆ. ಜಾಕ್‌ವೆಲ್‌ಗಾಗಿ ಹಣ ಇಲ್ಲ. ಎಲ್ ಐ.ಸಿ.ಯವರು ಕೊಟ್ಟ ಹಣವನ್ನ ಈಗಾಗಲೇ ಖರ್ಚು ಮಾಡಲಾಗಿದೆ. ಜಾಕ್‌ವೆಲ್ ಪಂಪ್ ಹಾಕಲಿಕ್ಕೆ ಎಲ್.ಐ.ಸಿ. ಪತಿಯಿಂದ ೬ ಲಕ್ಷ ರೂಪಾಯಿಗಳನ್ನೇನೋ ಕೇಡಿದ್ದಾರೆ. ಆದರೆ ಇನ್ನೂ ಈ ಕೆಲಸ ಮುಗಿದಿಲ್ಲ. ೧೧ ಲಕ್ಷ ರೂಪಾಯಿ ಬಡ್ಡಿಯನ್ನು ಮುನಿಸಿಪಾಲಿಟಿಯವರ ಮೇಲೆ ಹೇರಿ ಅವರಿಗೆ ಕೊಡತಕ್ಕಂತಹ ಗ್ರ್ಯಾಂಟ್‌ನಲ್ಲಿ ಕಟ್ ಮಾಡಿಕೊಂಡಿದ್ದಾರೆಂದು ನನಗೆ ವರದಿ ಬಂದಿದೆ.

ಶ್ರೀ ಎಂ. ಚಂದ್ರಶೇಖರ್.—ಅವರು ಹೇಳಿರುವ ಹಾಗೆ ಎಲ್ ಐ.ಸಿ. ಪತಿಯಿಂದ ಒಟ್ಟು ೫೬ ಲಕ್ಷ ರೂ ಬರಬೇಕಾಗಿದೆ ಈಗ ೪ ಲಕ್ಷ ರೂಪಾಯಿ ಬಂದಿದೆ. ಸರಕಾರದಿಂದ ೧೦ ಲಕ್ಷ ರೂಪಾಯಿ ಮತ್ತು ಆದಲ್ಲದೆ ಡಿಬೆಂಚರ್ಸ್‌ನಿಂದ ೧೧.೬೨ ಲಕ್ಷ ಒಟ್ಟು ಸಮಾಗೆ ಬಂದಿರುವುದು ೪೯.೬೨ಲಕ್ಷ ರೂ. ಬಂದಿರುವುದು ವಂಡಲಿಯಿಂದ ಖರ್ಚು ಮಾಡಿರುವುದು ೫೨ ೯೧ಲಕ್ಷ ರೂ. ಇದು ತಡವಾಗಲುವುದಕ್ಕೆ ಕಾರಣವೇನೆಂದರೆ ನಾನು ಹೇಳಿದ ಹಾಗೆ ಎರಡೂ ಪ್ರದೇಶಗಳಲ್ಲಿ ಜಮೀನು ತೊಂದರೆ ಮತ್ತು ಇನ್ನಿತರ ಕಾರಣಗಳಿಂದ ತಡವಾಗಿದೆ. ಈಗ ಅದು ಪರಿಹಾರವಾಗಿದೆ. ಕೆಲಸಗಳನ್ನು ತೀವ್ರಗತಿಯಿಂದ ಮಾಡುತ್ತೇವೆ.

ಶ್ರೀ ಕೆ. ಬಿ. ಶಾಣಪ್ಪ.—ಇದು ಒಂದು ವರ್ಷದ್ದು ಆಯಿತು. ನಾವು ಸುಮಾರು ೧೯೮೪-೮೫ರಲ್ಲಿ. ಕೋರ್ಟ್ ಮುಂದೆ ಹೋಗಿ ಸ್ಟೇ ವಾಪಸ್ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದೆವು ಸುಮಾರು ಮೂರು ವರ್ಷವಾಯಿತು. ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿಯೇ ಸಿ.ಐ. ಪೈಪ್‌ಗಳನ್ನು ಖರೀದಿ ಮಾಡಿ ಇಡುವಂತಹ ನೆಸೆಸಿಟಿ ಏನು ಇತ್ತು ? ಪ್ರಾಜೆಕ್ಟ್ ಕೈಗೆ ಬರದೇ ಅಧಿಕಾರಿಗಳು ಇದನ್ನು ಖರೀದಿ ಮಾಡುವಂತಹ ಪ್ರಮೇಯಂವೇನು ಇತ್ತು ? ಇದನ್ನು ಖರೀದಿ ಮಾಡುವುದಕ್ಕೆ ಕಾರಣವೇನು ? Why they have purchased ? If they have gone out of the way are you prepared to take action against those who have purchased the cast iron pipes without construction of the project ?

ಶ್ರೀ ಎಂ ಚಂದ್ರಶೇಖರ್.—ಇದು ನಮಗೆ ಅನುಭವವಾಗಿದೆ. ಸಿ.ಐ. ಪೈಪ್ ಸಪ್ಲೈ ಈಗ ಅಷ್ಟು ಸುಲಭವಾಗಿಲ್ಲ. ನೀರು ಸರಬರಾಜು ಮಂಡಲಿಯಲ್ಲಿ ೪-೫ ವರ್ಷಗಳ ಹಿಂದೆ ಹಾಕಿರುವಂತಹ ಆರ್ಡರ್ಸ್‌ಗಳಿಗೆ ಇವತ್ತಿಗೂ ಸಿಗುತ್ತಿಲ್ಲ. ಯಾವತ್ತು ಈ ಪೈಪ್‌ಗಳು ಸಿಗುತ್ತದೋ ಆವತ್ತು ಇದನ್ನು ತೆಗೆದಿಟ್ಟುಕೊಳ್ಳಬೇಕು. ಅದು ಏನೂ ಕರಗುವುದಿಲ್ಲ. ಜಾಕ್‌ವೆಲ್ ಕೆಲಸ, ರಿಸರ್ವಾಯರ್ ಕೆಲಸ ಬೇಗ ಆಗುತ್ತದೆಂದು ಆ ಕೆಲಸವನ್ನು ಆದಷ್ಟು ಬೇಗ ಮುಗಿಸೋಣವೆಂದು ಖರೀದಿ ಮಾಡಿಟ್ಟಿದ್ದಾರೆ. ಸಾಮಗ್ರಿಗಳನ್ನು ಬೇಗ ತೆಗೆದುಕೊಂಡರೆ ಆ ಕೆಲಸ ಆದಷ್ಟು ಬೇಗ ಪೂರ್ಣವಾಗುತ್ತದೆ ಮತ್ತು ಆಸ್ತಿ ಜೆಲೆ ಕೂಡ ಕಡಿಮೆಯಿರುತ್ತದೆ.

ಶ್ರೀ ಕೆ. ಬಿ. ಶಾಣಪ್ಪ.—೧೧ ಲಕ್ಷ ರೂಪಾಯಿ ಬಡ್ಡಿಯನ್ನು...

(ಗೊಂದಲ)

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ ನಿಮಗೆ ಮೂರು ಸಾರಿ ಅವಕಾಶ ಕೊಟ್ಟಿದ್ದೇನೆ, ನೀವು ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆ ಮುಗಿದಿದೆ. ಬಾಕಿ ಇರುವ ಎಲ್ಲ ಕ್ವೆಶ್ಚನ್ ಅನ್ನೂ ಲ್ಯಾಪ್ಸ್ ಮಾಡುತ್ತೇನೆ. ನಿಮಗೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಖರ್ಗೆಯವರೇ ತಾವು ಕೇಳಿ.

ಶ್ರೀ ಕೆ. ಬಿ. ಶಾಣಪ್ಪ.—ಮುನಿಸಿಪಾಲಿಟಿಯವರು ೧೧ ಲಕ್ಷ ರೂಪಾಯಿ ಬಡ್ಡಿಯನ್ನು ಏಕೆ ಕೊಡಬೇಕು ? ಸರಕಾರದಿಂದ ಉತ್ತರ ಕೊಡಬೇಕು.

ಅಧ್ಯಕ್ಷರು.—ಅವಕಾಶ ಕೊಡುವುದಕ್ಕಾಗುವುದಿಲ್ಲ ತಾವು ಮಾನ್ಯ ಸಚಿವರು ಪಕ್ಕದಲ್ಲಿ ಕುಳಿತು ಕೊಂಡು ಕೇಳಿ. ಬೇಕಾದರೆ ಹಾಫ್ ಆನ್ ಅವರ್ ಡಿಸ್‌ಕಷನ್‌ಗೆ ಹಾಕಿ.

Misuse of funds in Yadgir Division of Gulbarga Zilla Parishad

1829. Sri Mallikarjuna M. Kharge Gurmitkal.—Will the Minister for Rural Development and Panchayateraj will be pleased to state

a) Whether it has come to the notice of the Government that the Yadgir Division of Gulbarga Zilla Parishad has misused the released amount for various Developmental works in the Taluk;

b) If so the action taken by the Government to set right the mis-use and misapplication of funds in the said Divison particularly in Yadgir Sub-Division.